

ದೇವಾನುದೇವತೆಗಳ ವಿನ್ಯಾಸವಿರುವ ಒಡವೆಗಳನ್ನು ಧರಿಸುವುದು ಫ್ಯಾಷನ್ ಟ್ರೆಂಡ್. ಉಂಗುರ, ಪದಕ, ಕಿವಿಯೋಲೆಗಳಲ್ಲಿ ದೇವರ ಚಿತ್ರಗಳ ವಿನ್ಯಾಸ ದೈವೀಕಳೆ ಮೂಡಿಸುತ್ತವೆ.

■ ಆಶಾ ಎಸ್. ಕುಲಕರ್ಣಿ

# ಒಡವೆಗಳಲ್ಲಿ ದೈವಿಕ ಕಳೆ

ಒಡವೆಗಳಲ್ಲಿ ಅದೆಷ್ಟು ವಿನ್ಯಾಸ, ಅದೆಷ್ಟು ಅಂದ ಚಂದ. ಮಹಿಳೆಯರ ಅಲಂಕಾರದಲ್ಲಿ ಆಭರಣಗಳ ಪಾತ್ರ ಮಹತ್ವದ್ದು. ಕೆಲವರಿಗೆ ದೇವರ ಬಗ್ಗೆ ಅಪಾರ ನಂಬಿಕೆ. ಹೀಗಾಗಿ ದೇವಾನುದೇವತೆಗಳ ಚಿತ್ರವಿರುವ ಪದಕ, ಹಾರ, ಉಂಗುರ, ಸರ ಮುಂತಾದವುಗಳನ್ನು ಧರಿಸಿ ದೈವತ್ವವನ್ನು ಬಿಂಬಿಸುವುದು ರೂಢಿ. ಇದರ ಜೊತೆಗೆ ದೈವೀಕಳೆ ಬರಲೆಂದು ಓಂ ವಿನ್ಯಾಸದ್ದೋ, ತ್ರಿಶೂಲ ಆಕಾರದ್ದೋ, ಶಿವನ ಡಮರುಗದ ಚಿತ್ರವನ್ನೋ ಆಭರಣಗಳಲ್ಲಿ ಒಡಮೂಡಿಸಿ ಧರಿಸುವುದು ಟ್ರೆಂಡ್ ಎನಿಸಿದೆ.

ಆಭರಣ ಲೋಕದಲ್ಲಿ ಟೆಂಪಲ್ ಜ್ಯುವೆಲ್ಲರಿಗಳಿಗೆ ವಿಶಿಷ್ಟ ಸ್ಥಾನವಿದೆ. ದೇವರ ಚಿತ್ತಾರಗಳನ್ನೊಳಗೊಂಡ ವೈವಿಧ್ಯಮಯ ಒಡವೆಗಳು ಇದೀಗ ಮಾರುಕಟ್ಟೆಗೆ ಬಂದಿದ್ದು ಎಲ್ಲರ ಗಮನ ಸೆಳೆಯುತ್ತಿದೆ. ಅದರಲ್ಲೂ ಮದುವೆ ಸೀಸನ್‌ನಲ್ಲಿ ಎಲ್ಲಿ ನೋಡಿದರೂ ಈ ಟೆಂಪಲ್ ಜ್ಯುವೆಲರಿಗಳದ್ದೇ ಹವಾ. ಮದುಮಗಳಿಂದ ಹಿಡಿದು ಎಲ್ಲ ಮಹಿಳೆಯರೂ ತಾವು ಧರಿಸುವ ಗ್ರ್ಯಾಂಡ್ ಲುಕ್ ನೀಡುವ ಜರಿ ಸೀರೆಗಳು, ಹೆವಿ ಪಲ್ಲು ಬಾರ್ಡರ್ ಸೀರೆಗಳು ಹಾಗೆಯೇ ವಿವಿಧ ರೀತಿಯ ರೇಷ್ಮೆ ಸೀರೆಗಳ ಮೇಲೆ ಬಂಗಾರದ ಟೆಂಪಲ್ ಜ್ಯುವೆಲ್ಲರಿಗಳನ್ನು ಧರಿಸಿ ಮಿಂಚುವುದನ್ನು ನಾವು ನೋಡುತ್ತೇವೆ. ಈ ತರಹದ ಟೆಂಪಲ್ ಜ್ಯುವೆಲ್ಲರಿಗಳು ಸಾಂಪ್ರದಾಯಿಕ ಉಡುಪುಗಳಿಗೆ ಸಖತ್ತಾಗಿ ಮ್ಯಾಚ್ ಆಗುತ್ತವೆ.

ಇದರಲ್ಲಿ ದೈವಿಕ ಭಾವನೆ ಬಿಂಬಿಸುವ ದೇವರ ಚಿತ್ತಾರಗಳಿರುವ ದೊಡ್ಡ ದೊಡ್ಡ ಪೆಂಡೆಂಟ್ ಹಾಗೂ ಕಿವಿಯೋಲೆಗಳು ಎಲ್ಲರ ಗಮನ ಸೆಳೆಯುತ್ತಿವೆ. ವಿವಿಧ ಮೆಟಲ್‌ಗಳಲ್ಲಿಯೂ